**ಅ. ದಾ. ಸಂ : 269/2010**
**ಪಿ.ಡಬ್ಲ್ಯೂ : 03**

**ದಿನಾಂಕ : 17-07-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುः- 1 ನೇ ಪ್ರತಿವಾದಿಯ ಪರ ಶ್ರೀ. ಎಂ ಎನ್ ,ವಕೀಲರಿಂದ :-**

ನಾನು ಬೆಂಗಳೂರಿನಲ್ಲಿ 40 ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. ನಾನು ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು ಸಹ ನನಗೆ ಜಮೀನು ಗವಿನಾಗಮಂಗಳದಲ್ಲಿ ಯಾವ ಯಾವ ಮನೆಯಲ್ಲಿ ಯಾರು ಯಾರು ವಾಸಿಸುತ್ತಿದ್ದಾರೆ ಎಂದು ನನಗೆ ಗೊತ್ತು. ಸಾಕ್ಷಿಯು ಮುಂದುವರಿದು ತಾನು ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು ಸಹ ಗವಿನಾಗಮಂಗಳಕ್ಕೆ ಹೋಗಿ ಬಂದು ಮಾಡುತ್ತಿದ್ದೆ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯ ತಂದೆ ಗವಿನಾಗಮಂಗಳದಲ್ಲಿ ವಾಸಿಸುತ್ತಿದ್ದ ಬಗ್ಗೆ ಮಾಹಿತಿ ಇದೆಯಾ ಎಂದರೆ ಅವರು ಬೆಂಗಳೂರು ಮತ್ತು ಗವಿನಾಗಮಂಗಳ ಎರಡು ಕಡೆಯೂ ಸಹ ವಾಸಮಾಡುತ್ತಿದ್ದರು. 1 ನೇ ಪ್ರತಿವಾದಿಯ ತಂದೆ ಯ ಹೆಸರಿನಲ್ಲಿ ಬೆಂಗಳೂರಿನ ವಿಳಾಸದಲ್ಲಿ ಪಡಿತರ ಚೀಟಿ ಇತ್ತು ಮತ್ತು 1 ನೇ ಪ್ರತಿವಾದಿಯ ತಂದೆ ಗವಿನಾಗಮಂಗಳದಲ್ಲಿ ಮತವನ್ನು ಹಾಕುತ್ತಿದ್ದರು. 1 ನೇ ಪ್ರತಿವಾದಿಯ ತಂದೆಯವರ ಆಧಾರ್ ಕಾರ್ಡ್ ಗವಿನಾಗಮಂಗಳದ ವಿಳಾಸದಲ್ಲಿತ್ತು . 1 ನೇ ಪ್ರತಿವಾದಿಯ ತಂದೆಯವರ ಪಡಿತರ ಚೀಟಿಯನ್ನು ನಾನು ನೋಡಿದ್ದೇನೆ. ಸದರಿ ಪಡಿತರ ಚೀಟಿಯು ಬೆಂಗಳೂರಿನ ಬಿ ಇ ಎಲ್ ?ಲೇ ಔಟ್ ನ ಸರ್ಕಾರಿ ನ್ಯಾಯ ಬೆಲೆ ಅಂಗಡಿಗೆ ಸೇರಿರುತ್ತದೆ. ಸದರಿ ಪಡಿತರ ಚೀಟಿಯನ್ನು ನಾನು ವಾದಿಯ ಮನೆಯಲ್ಲಿ ನೋಡಿರುತ್ತೇನೆ.

**ಅ. ದಾ. ಸಂ : 269/2010**
**ಪಿ.ಡಬ್ಲ್ಯೂ : 03**

2. ಪಡಿತರ ಚೀಟಿಯನ್ನು ನೀಡಬೇಕಾದರೆ ಅಧಾರ್ ಕಾರ್ಡ ಮತ್ತು ಓಟರ್ ಐಡಿ ಕಾರ್ಡ ನಮೂದು ಮಾಡಿರುವ ವಿಳಾಸಕ್ಕೆ ನೀಡುತ್ತಾರೆ ಎಂದರೆ 1 ನೇ ಪ್ರತಿವಾದಿಯ ತಂದೆಯವರ ಪಡಿತರ ಚೀಟಿ ಬೆಂಗಳೂರಿನ ವಿಳಾಸಕ್ಕೆ ಸೇರಿರುತ್ತದೆ. ಸಾಕ್ಷಿಯು ಮುಂದುವರಿದು ಇತ್ತೀಚೆಗೆ ಆಧಾರ್ ಕಾರ್ಡ ಬಂದಿರುತ್ತದೆ ಮತ್ತು ಅದಕ್ಕೂ ಮೊದಲೇ 1 ನೇ ಪ್ರತಿವಾದಿಯ ತಂದೆಯ ಬಳಿ ಪಡಿತರ ಚೀಟಿ ಇತ್ತು ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯ ತಂದೆಯವರಿಗೆ ಬೆಂಗಳೂರಿನ ವಿಳಾಸಕ್ಕೆ ಯಾವುದೇ ಪಡಿತರ ಚೀಟಿ ಇರಲಿಲ್ಲ ಮತ್ತು ನಾನು ಅದನ್ನು ನೋಡಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ಯವರು ಬೆಂಗಳೂರಿನಲ್ಲಿ ವಾಸ ಮಾಡಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಅವರು ಬೆಂಗಳೂರು ಮತ್ತು ಗವಿನಾಗಮಂಗಳದಲ್ಲಿ ವಾಸ ಮಾಡಿದ್ದರು ಎಂದು ನುಡಿದಿರುತ್ತಾರೆ.

3. ಈ ದಾವೆಯನ್ನು ವಾದಿ ಮತ್ತು ಅವರ ಅಣ್ಣತಮ್ಮಂದಿರ ನಡುವೆ ಇರುವ ವಿವಾದಕ್ಕೆ ಸಂಬಂಧಿಸಿದಂತೆ ಹಾಕಿರುತ್ತಾರೆ. ವಾದಿಯು ಯಾವ ಪರಿಹಾರವನ್ನು ಕೋರಿ ಈ ದಾವೆಯನ್ನು ಹಾಕಿದ್ದಾರೆ ಎಂದರೆ ವಾದಿಯು ಅವರ ತಂದೆಯ ಆಸ್ಪತೆಯ, ತಂಗಿಯ ಮದುವೆಯನ್ನು ಮತ್ತು ಬ್ಯಾಂಕ್ ಸಾಲವನ್ನು ತೀರಿಸಲು ಜಮೀನನ್ನು ಬಿಟ್ಟಿದ್ದರು , ಆ ಜಮೀನನ್ನು ಅವರ ತಮ್ಮನಾದ 1 ನೇ ಪ್ರತಿವಾದಿಯು ವಾದಿಗೆ ತಿಳಿಯದ ಆಗೆ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ ಸ್ವತ್ತಿನ್ನು ಖರೀದಿ ಮಾಡಿದ ದಿನದಿಂದಲೂ 2 ನೇ ಪ್ರತಿವಾದಿಯೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ.

4. ವಾದಿ, 1 ನೇ ಪ್ರತಿವಾದಿ ಮತ್ತು ಅವರ ತಂದೆಯ ನಡುವೆ ನಡೆದ ವಿಭಾಗದಂತೆ ದಾವಾ ಆಸ್ತಿಯು 1 ನೇ ಪ್ರತಿವಾದಿಯವರ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ನಾನು ಮತ್ತು ವಾದಿಯು ಸ್ನೇಹಿತರು ಎಂದರೆ ಸ್ನೇಹಿತರಲ್ಲ, ಆದರೆ ಸಂಬಂಧಿಕರು. ನಾನು ಮತ್ತು ವಾದಿ 1 ನೇ ಪ್ರತಿವಾದಿಯ ಜೊತೆ ಚೆನ್ನಾಗಿ ಇದ್ದೇನೆ. ವಾದಿಯವರ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ.ಸಿ.ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**